ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

# ಚಿಣ್ಣರ ಚೇತನ

2011 ಜನವರಿ 1–15

ಓ ನನ್ನ ಚೇತನ ಆಗು ನೀ ಅನಿಕೇತನ

ನಮ್ಮದು ಕೃಷಿ ಆಧಾರಿತ ದೇಶ. ಆದರೂ ಕೃಷಿಕನಿಗೆ ಮತ್ತು ಕೃಷಿ ವಿಧಾನಗಳಿಗೆ ಸೂಕ್ತ ಪ್ರಾಧಾನ್ಯತೆ ದೊರಕಿಲ್ಲ. ಕೆಲ ತಪ್ಪು ಮತ್ತು ತಾತ್ಕಾಲಿಕ ವಿದೇಶಿ ವಿಧಾನಗಳಿಂದ ನಮ್ಮ ರೈತರು ತಪ್ಪು ದಾರಿ ಹಿಡಿದಿದ್ದಾರೆ. ಅಜ್ಞಾನದಿಂದಲೋ ಲಾಭದ ಆಸೆಯಿಂದಲೋ ನೆಲ ಹಾಳಾಗುತ್ತಿದೆ. ಬೆಳೆ ವಿಷಮಯವಾಗುತ್ತಿದೆ. ಸಾವಯವ ಕೃಷಿಯೇ ಇದಕ್ಕೆ ಉತ್ತರ. ಈ ಸಂಚಿಕೆಯಲ್ಲಿ ಸಾವಯವ ಕೃಷಿಯ ಮಾಹಿತಿ ಇದೆ. ಮಕ್ಕಳೇ, ಈ ಪತ್ರಿಕೆ ಓದಿ ಪರಿಚಿತ ರೈತರಿಗೆ ಈ ವಿಷಯ ತಿಳಿಸಿ.

–ಸಂಪಾದಕರು

## ಸಮಾಚಾರ

### ಉಳ್ಳವರಿಗೆ ಮಾತ್ರ ಉಳ್ಳಾಗಡ್ಡಿ



ಜನಸಾಮಾನ್ಯರ ತರಕಾರಿ ಎಂದು ಕರೆಯುತ್ತಿದ್ದ ಈರುಳ್ಳಿಯ ಬೆಲೆ ಈಗ ಜನಸಾಮಾನ್ಯರ ಕೈಗೆಟುಕದ ರೀತಿಯಲ್ಲಿ ಏರಿಕೆ ಆಗಿದೆ. ಉತ್ತರ ಕರ್ನಾಟಕದಲ್ಲಿ ಉಳ್ಳಾಗಡ್ಡಿ ಎಂದು ಕರೆಯುತ್ತಾರೆ. ಕೆಜಿಗೆ 80ರೂನಷ್ಟು ತುಟ್ಟಿಯಾಗಿದ್ದ ಉಳ್ಳಾಗಡ್ಡಿ ಈಗ ಉಳ್ಳವರಿಗೆ ಮಾತ್ರ ಎಂದಾಗಿದೆ.

### ಗುರಿ ತಲುಪದ ಜಿಎಸ್‌ಎಲ್‌ವಿ

ಡಿಸೆಂಬರ್ ಅಂತ್ಯದಲ್ಲಿ ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋ ಉಡಾಯಿಸಿದ ಜಿಎಸ್‌ಎಲ್‌ವಿ ರಾಕೆಟ್ ತನ್ನ ಗುರಿ ಸಾಧಿಸುವಲ್ಲಿ ಯಶಸ್ವಿಯಾಗಲಿಲ್ಲ. 2010ರ ಏಪ್ರಿಲ್‌ನಲ್ಲಿ ಇಸ್ರೊದ ಮತ್ತೊಂದು ಜಿಎಸ್‌ಎಲ್‌ವಿ ರಾಕೆಟ್ ಕೂಡ ಇದೇ ರೀತಿ ಪತನಗೊಂಡಿತ್ತು. ಹಾಗಿದ್ದರೂ ಈ ಹಿಂದೆ ಇಸ್ರೋದ ವಿಜ್ಞಾನಿಗಳು ದೇಶ ಹೆಮ್ಮೆ ಪಡುವಂಥ ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಈಗಿನ ವೈಫಲ್ಯಕ್ಕೆ ಕಾರಣಗಳನ್ನು ಹುಡುಕಿ ಸರಿಪಡಿಸಿಕೊಳ್ಳುವ ಕೆಲಸ ಈಗಾಗಲೇ ಶುರುವಾಗಿದೆ. ಸೋಲು ಗೆಲುವಿನ ಸೋಪಾನ ಅಲ್ಲವೆ? ಧೃತಿಗೆಡದೆ ಮುಂದಡಿ ಇಟ್ಟರೆ ಯಶಸ್ಸು ಖಚಿತ.

### ಕರ್ನಾಟಕದಲ್ಲಿ ದಾಖಲೆ ಚಳಿ

ಸುಡು ಬಿಸಿಲಿಗೆ ಹೆಸರಾಗಿದ್ದ ಬಿಜಾಪುರದಲ್ಲಿ ಮೈ ಕೊರೆಯುವ ಚಳಿ. ವಿಜಾಪುರ ಅಷ್ಟೇ ಅಲ್ಲ, ಗುಲ್ಬರ್ಗಾ, ಗದಗ, ಧಾರವಾಡ ಹಾಗೂ ಬೆಳಗಾವಿ ಎಲ್ಲಾ ಜಿಲ್ಲೆಗಳಲ್ಲೂ ತಾಪಮಾನ 10ಡಿಗ್ರಿಗಿಂತ ಕೆಳಗಿಳಿದಿದೆ. ಕರ್ನಾಟಕದ ರಾಜಧಾನಿ 'ಏರ್‌ಕಂಡೀಷನ್ಡ್ ಸಿಟಿ' ತಂಪು ಬೆಂಗಳೂರಂತೂ ಮತ್ತಷ್ಟು ತಂಪಾಗಿದೆ.

### ಪಂಚಾಯ್ತಿ ಚುನಾವಣೆ

ಡಿಸೆಂಬರ್ 26, 31 ಮತ್ತು ಜನವರಿ 1 ರಂದು ಕರ್ನಾಟಕದಲ್ಲಿ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಚುನಾವಣೆ ನಡೆದವು. 3 ಹಂತದಲ್ಲಿ ನಡೆದ ಚುನಾವಣೆಯ ಫಲಿತಾಂಶ ಜನವರಿ ನಾಲ್ಕರಂದು ಪ್ರಕಟವಾಯಿತು.

# ಸಹಜ ಕೃಷಿ

## ಸಾವಯವ ಬೇಸಾಯ



ಚಿತ್ರ: ಯುತಿ ಷಾ

ಉಣ್ಣುವ ಆಹಾರ ವಿಷಮಯವಾಗುತ್ತಿರುವುದು ಇಂದು ಪ್ರಪಂಚದ ಅತಿ ದೊಡ್ಡ ಸಮಸ್ಯೆ. ಅಧಿಕ ಇಳುವರಿಯ ಬಯಕೆಯಿಂದ ಬೆಳೆಗಳಿಗೆ ಅತಿಯಾದ ರಾಸಾಯನಿಕ ಬಳಸುವುದು ಈ ಪರಿಸ್ಥಿತಿಗೆ ಮುಖ್ಯ ಕಾರಣ. ಹಾಗಾದರೆ ವಿಷವಿಲ್ಲದ ಆಹಾರ ಬೆಳೆಯುವುದು ಸಾಧ್ಯವಿಲ್ಲವೇ? ಯಾಕಿಲ್ಲ? ನಮ್ಮ ಸಾವಿರಾರು ವರ್ಷಗಳ ಕೃಷಿ ಚರಿತ್ರೆಯಲ್ಲಿ ರಾಸಾಯನಿಕ ವಿಷಮಯ ಕೃಷಿ ಕೇವಲ 50–60 ವರ್ಷಗಳಷ್ಟೇ ಹಳೆಯದು. ಅದಕ್ಕೂ ಹಿಂದೆ ನಮ್ಮ ನೆಲದ ಕೃಷಿ, ಪರಿಸರದ ಸಕಲ ಜೀವಜಂತುಗಳೊಂದಿಗೆ ಸಮರಸ ಹೊಂದಿ ಪರಿಶುದ್ಧ ಆಹಾರ ಕೊಡುತ್ತಿದ್ದ ಪದ್ಧತಿಯಾಗಿತ್ತು. ರಾಸಾಯನಿಕ ಕೃಷಿಯ ತಪ್ಪು ವಿಧಾನಗಳಿಂದ ಈ ಪೂರಕ ಸಂಬಂಧಗಳು ಕಡಿದು ಆಹಾರ ವಿಷಮಯವಾಯಿತು.

### ರಾಸಾಯನಿಕ ಕೃಷಿ ಮಾಡಿದ್ದೇನು?

- ರೈತರು ಬೆಳೆಯುತ್ತಿದ್ದ ವೈವಿಧ್ಯಮಯ ಮಿಶ್ರ ಬೆಳೆಗಳ ಜಾಗದಲ್ಲಿ ಏಕಬೆಳೆ ಪದ್ಧತಿ ತಂದದ್ದು
- ಗಟ್ಟಿಮುಟ್ಟಾಗಿ ಕಷ್ಟ ಸಹಿಷ್ಣುವಾಗಿದ್ದ ರೈತರ ಮನೆ–ಬೀಜಗಳ ಜಾಗದಲ್ಲಿ ದುರ್ಬಲವಾದ ಅಧಿಕ ಇಳುವರಿ/ಹೈಬ್ರಿಡ್ ಬೀಜ ತಂದದ್ದು
- ಕೊಟ್ಟಿಗೆಗೊಬ್ಬರ, ಕೆರೆ ಗೋಡು, ಹಸಿರೆಲೆ ಗೊಬ್ಬರ, ಬೇವು–ಹೊಂಗೆ ಹಿಂಡಿಗಳು, ಮಿಶ್ರ ಬೆಳೆ, ಪರ್ಯಾಯ ಬೆಳೆ ಪದ್ಧತಿಗಳಿಂದ ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಂಡು ಬಂದಿದ್ದ ಹೊಲಗಳಿಗೆ ರಾಸಾಯನಿಕ ಗೊಬ್ಬರ ಹಾಕಿಸಿದ್ದು
- ರೈತರಿಗೆ ತಮ್ಮದಲ್ಲದ ಬೆಳೆ ಬೆಳೆಯಲು ಉತ್ತೇಜಿಸಿದ್ದು
- ಇವೆಲ್ಲ ತಪ್ಪು ಪದ್ಧತಿಗಳಿಂದ ರೋಗ –ಕೀಟಗಳ ಹಾವಳಿ ಹೆಚ್ಚಾದಾಗ ವಿಷಮಯ ಕೀಟನಾಶಕ ಸಿಂಪಡಣೆ ಮಾಡತೊಡಗಿದ್ದು.

ಇವುಗಳಿಂದಾಗಿ ಕೆಲವೇ ವರ್ಷಗಳಲ್ಲಿ ರೈತರ ಮನೆ–ಬೀಜಗಳು ಕೈತಪ್ಪಿ ಅಂಗಡಿ ಬೀಜದ ಮೇಲೆ ಅವಲಂಬಿಸುವಂತಾಯಿತು. ಭೂಮಿ ಸತ್ವ ಕಳೆದುಕೊಂಡು, ನೀರು ವಿಷಮಯವಾಯಿತು. ನಿರಂತರ ನಷ್ಟ ಅನುಭವಿಸಿದ ರೈತರು ಕೃಷಿ ತೊರೆದರು. ಕೆಲವರಂತೂ ಆತ್ಮಹತ್ಯೆಗೆ ಶರಣಾದರು.

### ಪರಿಹಾರ?

ಪ್ರಪಂಚ ಈ ವಿಷವರ್ತುಲದಲ್ಲಿ ನರಳುತ್ತಿದ್ದಾಗ ಜಪಾನಿನ ಒಬ್ಬ ಮಹಾನ್ ರೈತ ಉಳುಮೆ ರಹಿತ ಸಹಜ ಕೃಷಿಯ ಬಗ್ಗೆ ಮಾತನಾಡತೊಡಗಿದರು. ಅವರೇ ಮಸನೊಬು ಫುಕುವೊಕ. ಈತ ದುರಾಸೆಯ ತಳಹದಿಯ ಮೇಲೆ ಕಟ್ಟಿದ ರಾಸಾಯನಿಕ ಕೃಷಿಗೆ ಪರ್ಯಾಯವಾಗಿ ಪ್ರಕೃತಿಯ ವಿವರಗಳೊಂದಿಗೆ ಸಂಪೂರ್ಣ ಸಾಮರಸ್ಯದಲ್ಲಿ ಕೃಷಿ ಮಾಡುವುದು ಹೇಗೆ ಎಂದು ತೋರಿಸಿಕೊಟ್ಟರು. ಹೆಚ್ಚು ಹೆಚ್ಚು ರೈತರು ಇದನ್ನು ಅನುಸರಿಸತೊಡಗಿದರು. ಈ ಪರಿಸರದ ಸಕಲ ಜೀವ ಜಂತುಗಳಿಗೂ ಮನುಷ್ಯರಂತೆಯೇ ಜೀವಿಸುವ ಹಕ್ಕಿದೆ ಎಂದು ನಂಬುವ ಸಾವಯವ ಕೃಷಿ ಕೀಟನಾಶಕಗಳನ್ನು ದೂರಮಾಡಿದೆ. ಆಯಾ ಪ್ರದೇಶದಲ್ಲಿ ಬೆಳೆಯುವ ಎಲ್ಲ ಬೆಳೆಗಳನ್ನು ಜೋಡಣೆ ಮಾಡಿಕೊಂಡು ಬೆಳೆಯುವ ಮೂಲಕ ಪರಿಸರದಲ್ಲಿನ ಸ್ವಾಭಾವಿಕ ಜೀವ ಸರಪಳಿಯನ್ನು ಉತ್ತೇಜಿಸುತ್ತಿದೆ. ತನ್ಮೂಲಕ ಮಣ್ಣಿಗೆ ಫಲವತ್ತತೆ ತಂದು, ರೋಗ ಕೀಟಗಳನ್ನು ಸಹಜವಾಗಿ ನಿಯಂತ್ರಣದಲ್ಲಿಟ್ಟು ರುಚಿಯಾದ ವಿಷಮುಕ್ತ ಆಹಾರವನ್ನು ಸಮೃದ್ಧವಾಗಿ ಬೆಳೆಯುವ ದಾರಿ ತೋರಿಸುತ್ತಿದೆ.

ನಿಮಗೆ ಗೊತ್ತೆ? ಇಂದು ಸಾವಯವ ಕೃಷಿಯಲ್ಲಿ ಕರ್ನಾಟಕ ಉಳಿದೆಲ್ಲ ರಾಜ್ಯಗಳಿಗಿಂತ ಮುಂದಿದೆ. ಕರ್ನಾಟಕ ಸರಕಾರ ಸಾವಯವ ಕೃಷಿ ಮಿಷನ್ ಅನ್ನು ಸ್ಥಾಪಿಸಿದೆ. 100 ಕೋಟಿ ರೂ ವೆಚ್ಚದ ಯೋಜನೆಯೊಂದನ್ನು ರೂಪಿಸಿದೆ. 50 ಸಾವಿರ ರೈತರನ್ನು ಒಳಗೊಳ್ಳುವ ಈ ಯೋಜನೆಯಡಿ 71 ಸಾವಿರ ಹೆಕ್ಟೇರ್ ಭೂಮಿ ಸಾವಯವ ಪದ್ಧತಿ ಅನುಸರಿಸಲಿದೆ.

# ಸ್ನಾನ ವಿಜ್ಞಾನ

ತುಂಬಾ ಹಿಂದೆ ಗ್ರೀಸ್ ದೇಶದಲ್ಲಿ ಒಬ್ಬ ರಾಜನಿದ್ದನಂತೆ. ಅವನು ಹೊಸದೊಂದು ಕಿರೀಟ ಮಾಡಿಸಿದ್ದ. ಅವನಿಗೇಕೋ ಆ ಕಿರೀಟದ ಚಿನ್ನದಲ್ಲಿ ಕಲಬೆರಕೆ ಆಗಿರಬಹುದು ಎಂಬ ಸಂಶಯ ಬಂತು; ಈ ಸಂಶಯ ಯಾರು ನಿವಾರಿಸುತ್ತೀರೋ ಅವರಿಗೆ ಬಹುಮಾನ ಕೊಡುತ್ತೇನೆ ಎಂದು ಸವಾಲು ಹಾಕಿದ.

ಅವನ ಆಸ್ಥಾನದಲ್ಲಿ ಆರ್ಕಿಮಿಡಿಸ್ ಎಂಬ ವ್ಯಕ್ತಿ ಇದ್ದ. ವಸ್ತುವಿನ ಸಾಂದ್ರತೆಗೆ ತಕ್ಕಂತೆ ಅದರ ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ ಎನ್ನುವುದು ಅವನಿಗೆ ಗೊತ್ತಿತ್ತು. ಆದರೆ ಬೆರಕೆ ಲೋಹದಲ್ಲಿ ಯಾವ ಲೋಹ ಎಷ್ಟು ಮಿಶ್ರವಾಗಿದೆ ಎಂಬುದನ್ನು ಹೇಗೆ ಗುರುತಿಸಬೇಕು ಎನ್ನುವುದು ಗೊತ್ತಿರಲಿಲ್ಲ. ಅವನು ಅದೇ ವಿಷಯದ ಬಗ್ಗೆ ಹಗಲೂ ರಾತ್ರಿ ಯೋಚಿಸುತ್ತಲೇ ಇದ್ದ. ಅವನ ಏಕಾಗ್ರತೆ ಎಷ್ಟರ ಮಟ್ಟಿಗೆ ಇತ್ತು ಎಂದರೆ ಸ್ನಾನ ಮಾಡುವಾಗಲೂ ಅದನ್ನೇ ಯೋಚಿಸುತ್ತ ಸ್ನಾನದ ತೊಟ್ಟಿಗೆ ಇಳಿದ.




ತೊಟ್ಟಿಯೊಳಕ್ಕೆ ಇಳಿದ ತಕ್ಷಣ ಒಂದಷ್ಟು ನೀರು ಹೊರಚೆಲ್ಲಿತು. ಅದನ್ನು ನೋಡಿದ ತಕ್ಷಣ ಆರ್ಕಿಮಿಡಿಸ್‌ಗೆ ಅವನ ಗಾತ್ರ ಹಾಗೂ ತೊಟ್ಟಿಯಿಂದ ಹೊರಚೆಲ್ಲಿದ ನೀರಿನ ನಡುವೆ ಇರುವ ಸಂಬಂಧ ಹೊಳೆಯಿತು. ಈ ಖುಷಿಯಲ್ಲಿ ಆತ ಬಟ್ಟೆಯನ್ನೂ ಹಾಕಿಕೊಳ್ಳದೆ ಯುರೇಕಾ! ಯುರೇಕಾ!! (ನಾನು ಕಂಡುಹಿಡಿದೆ!!) ಎಂದು ಕೂಗುತ್ತ ರಾಜನ ಹತ್ತಿರ ಓಡಿಹೋದನಂತೆ.

ಒಂದೇ ತೂಕದ ಚಿನ್ನದ ಗಾತ್ರಕ್ಕೂ ಕಲಬೆರಕೆ ಯಾಗಿದ್ದ ಲೋಹದ ಗಾತ್ರಕ್ಕೂ ವ್ಯತ್ಯಾಸವಿರುತ್ತದೆ. ಆರ್ಕಿಮಿಡಿಸ್ ಮೊದಲು ಕಿರೀಟದಷ್ಟೇ ತೂಕದ ಶುದ್ಧ ಚಿನ್ನ ತೆಗೆದುಕೊಂಡು ನೀರಿನಲ್ಲಿ ಮುಳುಗಿಸಿದಾಗ ಅದೆಷ್ಟು ನೀರನ್ನು ಹೊರಚೆಲ್ಲುತ್ತದೆ ಎನ್ನುವುದನ್ನು ಪತ್ತೆಮಾಡಿದ; ಆನಂತರ ಕಿರೀಟವನ್ನು ಮುಳುಗಿಸಿ ಅದು ಹೊರಚೆಲ್ಲಿದ ನೀರನ್ನು ಅಳೆದ. ಇದೆರಡರಲ್ಲೂ ವ್ಯತ್ಯಾಸ ಕಂಡುಬಂದಿದ್ದರಿಂದ ಕಿರೀಟದಲಿನ ಚಿನ್ನ ಕಲಬೆರಕೆಯಾಗಿತ್ತು ಎನ್ನುವುದು ಗೊತ್ತಾಯಿತು.

ಸಾವಿರಾರು ಕೆಜಿ ತೂಗುವ ಹಡಗುಗಳು ನೀರಿನಲ್ಲಿ ಮುಳುಗದೆ ತೇಲುವುದು ಹೇಗೆ? ಈ ಪ್ರಶ್ನೆಗೆ ಹಡಗು ತನ್ನ ತೂಕಕ್ಕೆ ಸರಿಸಮನಾದಷ್ಟು ನೀರನ್ನು ಮಾತ್ರವೇ ತನ್ನ ಬುಡದಿಂದ ಆಚೀಚೆತಳ್ಳುವುದರಿಂದ ಅದು ತೇಲುತ್ತದೆ ಎಂದು ವಿವರಿಸಿದ ಆರ್ಕಿಮಿಡಿಸ್ ಕ್ರಿ. ಪೂ. 287ರಿಂದ 212ರ ನಡುವೆ ಜೀವಿಸಿದ್ದ.

ಭಾರತದ ಪ್ರಸಿದ್ಧ ಕಾದಂಬರಿಕಾರರಲ್ಲಿ ಆರ್.ಕೆ. ನಾರಾಯಣ್ ಪ್ರಮುಖರು. ಅವರ ಕಲ್ಪನೆಯ ಊರು ಮಾಲ್ಗುಡಿ. ನಾರಾಯಣರ ಬಹುಪಾಲು ಕಥೆಗಳು ನಡೆಯುವುದು ಸರಯೂ ನದಿ ತೀರದಲ್ಲಿ, ಮೆಂಪಿ ಬೆಟ್ಟದ ತಪ್ಪಲಲ್ಲಿ ಇರುವ ಈ ಕಾಲ್ಪನಿಕ ಊರಿನಲ್ಲೇ. ಅವರ ಮೊದಲ ಪುಸ್ತಕ 'ಸ್ವಾಮಿ ಮತ್ತು ಅವನ ಸ್ನೇಹಿತರು', ಮಾಲ್ಗುಡಿಯ ಪುಟ್ಟ ಹುಡುಗ ಸ್ವಾಮಿನಾಥನ್ ಹಾಗೂ ಆತನ ಗೆಳೆಯರ ಚಟುವಟಿಕೆಗಳನ್ನು ನಿರೂಪಿಸುತ್ತದೆ. ಸ್ವಾಮಿ, ರಾಜಂ ಹಾಗೂ ಮಣಿ ಇಲ್ಲಿನ ಮುಖ್ಯ ಪಾತ್ರಗಳು. ಎಚ್ ವೈ ಶಾರದಾಪ್ರಸಾದ್ ಕನ್ನಡಕ್ಕೆ ಅನುವಾದಿಸಿರುವ ಈ ಪುಸ್ತಕವನ್ನು ನೀವೆಲ್ಲ ಓದಲೇಬೇಕು.

ನಾರಾಯಣ್ ಅವರ ಕಥೆಗಳನ್ನು ಆಧರಿಸಿ ಕನ್ನಡದ ಪ್ರಸಿದ್ಧ ನಟ ಶಂಕರ್‌ನಾಗ್ 'ಮಾಲ್ಗುಡಿ ಡೇಸ್' ಎಂಬ ಟಿವಿ ಧಾರಾವಾಹಿಯನ್ನು ನಿರ್ಮಿಸಿದ್ದರು. ಬಹಳ ಪ್ರಸಿದ್ಧವಾದ ಈ ಸರಣಿಯಲ್ಲಿ ಕರ್ನಾಟಕದ ಆಗುಂಬೆಯನ್ನು ಮಾಲ್ಗುಡಿಯಾಗಿ ತೋರಿಸಲಾಗಿತ್ತು. ಈ ಧಾರಾವಾಹಿಯಲ್ಲಿ ಸ್ವಾಮಿಯ ಪಾತ್ರದಲ್ಲಿ ಮಾಸ್ಟರ್ ಮಂಜುನಾಥ್ ಅಭಿನಯಿಸಿದ್ದರು. ಇದಕ್ಕಾಗಿ ಆರ್ ಕೆ ನಾರಾಯಣ್‌ರ ತಮ್ಮ, ಖ್ಯಾತ ವ್ಯಂಗ್ಯಚಿತ್ರಕಾರ ಆರ್ ಕೆ ಲಕ್ಷ್ಮಣ್‌ರವರು ಬರೆದ ರೇಖಾಚಿತ್ರಗಳು ಬಹಳ ಜನಪ್ರಿಯವಾಗಿವೆ.




## ಮನೆಮದ್ದು: ನೆಗಡಿ



ಸಣ್ಣ ಕಾಯಿಲೆಗೂ ಮಾತ್ರೆ ತಿನ್ನುವ ಬದಲು ಮಾಡಬಹುದಾದ ಮನೆಮದ್ದುಗಳನ್ನು ತಿಳಿಸುವ ಪುಟ್ಟ ಅಂಕಣ

1. ಬಿಸಿನೀರಿನ ಹಬೆ : ಒಂದು ಪಾತ್ರೆಯಲ್ಲಿ ನಾಲ್ಕರಿಂದ ಐದು ಲೋಟ ನೀರು ಹಾಕಿ ಒಲೆಯ ಮೇಲಿಟ್ಟು ಕುದಿಸಬೇಕು. ನೀರು ಕುದಿಯಲು ಪ್ರಾರಂಭವಾದ ಮೇಲೆ ಮುಚ್ಚಳ ಮುಚ್ಚಿ ಉರಿಯನ್ನು ನಿಲ್ಲಿಸಬೇಕು. ನಿಮ್ಮ ಮುಖ ಹಾಗೂ ಪಾತ್ರೆ ಎರಡೂ ಮುಚ್ಚುವಂತೆ ದಪ್ಪ ಬಟ್ಟೆಯಿಂದ ಮುಚ್ಚಿ ಪಾತ್ರೆಯ ಮುಚ್ಚಳ ತೆಗೆದು ಉಗಿಯನ್ನು/ಆವಿಯನ್ನು ಮೂಗು ಹಾಗೂ ಬಾಯಿಯಿಂದ ಎಳೆದುಕೊಳ್ಳಬೇಕು. (ಸೂಚನೆ: ಇದನ್ನು ದೊಡ್ಡವರ ಎದುರಿನಲ್ಲೇ ಮಾಡಬೇಕು)
2. ನೆಗಡಿ ಬಂದಾಗ ಬಿಸಿ ಪಾನೀಯಗಳನ್ನು ಜಾಸ್ತಿ ಕುಡಿಯಬೇಕು. ಬಿಸಿಬಿಸಿಯಾದ ಹಾಗೂ ಸುಲಭವಾಗಿ ಜೀರ್ಣವಾಗುವ ಗಂಜಿ, ಅನ್ನ ಸೇವಿಸಬೇಕು.
3. ಧೂಳಿನಲ್ಲಿ ಜಾಸ್ತಿ ಓಡಾಡಬಾರದು.

ಸಾವಯವ ಕೃಷಿಯ ಬಗ್ಗೆ ಈ ಸಂಚಿಕೆಯಲ್ಲಿಲ್ಲದ ಮಾಹಿತಿಯನ್ನು ಕಲೆಹಾಕಿ ನಮಗೆ ಬರೆದು ಕಳಿಸಿರಿ. ಚೆಂದದ ಬರಹಕ್ಕೆ ಬಹುಮಾನವಿದೆ. ವಿಳಾಸ ಕೆಳಗಿದೆ.

ಅದಮ್ಯ ಚೇತನ
'ಅನ್ನಪೂರ್ಣ'
ಮಹಾನಗರಪಾಲಿಕೆ ಸಮುದಾಯ ಭವನ
ಗವಿಪುರ, ಬೆಂಗಳೂರು –19

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ ಬೆಂಗಳೂರು

ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.
© ಹಕ್ಕುಗಳನ್ನು ಕಾದಿರಿಸಲಾಗಿದೆ

ಸರ್ವ ಶಿಕ್ಷಣ ಅಭಿಯಾನ ಮಿಷನ್
ಬೆಂಗಳೂರು